ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಹಾಗೂ ಎಫ್.ಟಿ.ಎಸ್.ಸಿ-**1,** ಹಾವೇರಿ
ಎಸ್.ಸಿ.**18/2020**

PW- 13
CW-18

ಸಾಕ್ಷಿದಾರರ ಹೆಸರುಃ ವಿಶ್ವನಾಥ ಚೌದರಿ
ತಂದೆಯ ಹೆಸರುಃ ಮೃತ್ಯುಂಜಯ
ವಯಸ್ಸುಃ 45 ವರ್ಷ
ಉದ್ಯೋಗಃ ವ್ಯವಸಾಯ
ಹಾಲಿ ವಾಸ ಸ್ಥಳಃ ಬನವಾಸಿ , ಶಿರಸಿ

ದಿನಾಂಕ**: 29.11.2024** ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ

ಮೃತ ಶಾಂತಾಬಾಯಿ ನನ್ನ ಅತ್ತೆ. ಚಾಸಾ-14 ನನ್ನ ತಂದೆ. ಚಾಸಾ-1 ಚಿಕ್ಕಪ್ಪ. ಚಾಸಾ-15 ನನ್ನ ದೊಡ್ಡಪ್ಪ. ಚಾಸಾ-16 ನನ್ನ ತಾಯಿ. ಚಾಸಾ-17 ನನ್ನ ದೊಡ್ಡಪ್ಪನ ಮಗ. ನನ್ನ ಮೃತ ಅತ್ತೆಗೆ ಚಾಸಾ-8 ರಿಂದ 12 ಒಟ್ಟು 5 ಜನ ಮಕ್ಕಳು. ಮೃತ ನನ್ನ ಅತ್ತೆ ಶಿಗ್ಗಾಂವ ಪಟ್ಟಣದ ಹಳೆಪೇಟೆ ತಮ್ಮ ಸ್ವಂತ ಮನೆಯಲ್ಲಿ ಒಬ್ಬಳೇ ವಾಸಿಸುತ್ತಿದ್ದಳು. ಮೃತ ನನ್ನ ಅತ್ತೆ ಗಂಡ 2012 ರಲ್ಲಿ ತೀರಿಕೊಂಡಿರುತ್ತಾನೆ. ಮೃತ ನನ್ನ ಅತ್ತೆಗೆ 5 ಮಕ್ಕಳ ಪೈಕಿ 4 ಜನ ಗಂಡು ಮಕ್ಕಳಿಗೆ ಮದುವೆಯಾಗಿದ್ದು ಪ್ರತ್ಯೇಕವಾಗಿ ವಾಸವಾಗಿದ್ದಳು. ನನ್ನ ಅತ್ತೆಗೆ ಒಬ್ಬಳೇ ಮಗಳನ್ನು ಚಾಸಾ-12 ಇವಳು ಶಿಕಾರಿಪುರಕ್ಕೆ ಮದುವೆಯನ್ನು ಮಾಡಿಕೊಟ್ಟಿದ್ದು ಅವಳು ಗಂಡನ ಮನೆಯಲ್ಲಿ ವಾಸವಾಗಿದ್ದಳು. ನಾನು ಮತ್ತು ಚಾಸಾ-8 ರಿಂದ 12 ರವರು ನನ್ನ ಅತ್ತೆಯ ಮನೆಗೆ ಆಗಾಗ ಹೋಗಿ ಬಂದು ಮಾಡುತಿದ್ದೆವು.

ತಾಃ 17.08.2019 ರಂದು ಬೆಳಿಗ್ಗೆ ಸುಮಾರು 8.30 ಕ್ಕೆ ಮೃತ ನನ್ನ ಅತ್ತೆಯ ಮಗ ಚಾಸಾ-8 ನಮಗೆ ಕರೆ ಮಾಡಿ ನನ್ನ ಅತ್ತೆಗೆ ಹೃದಯಾಘಾತವಾಗಿ ತೀರಿಕೊಂಡಿರುತ್ತಾಳೆಂದು ಹೇಳಿದರು. ನಾವು ವಿಷಯ ಗೊತ್ತಾಗಿ ನಮ್ಮ ಅತ್ತೆಯ ಮನೆಗೆ ಹೋದೆವು. ಮನೆಯ ಒಳಗಡೆ ಹೋದಾಗ ಅವಳು ದಿನಾಲು ಮಲಗುವ ಮಂಚದಲ್ಲಿ ಅಂಗಾತವಾಗಿ ಮಲಗಿದ್ದ ಸ್ಥಿತಿಯಲ್ಲಿದ್ದಳು. ಅವಳ ಎರಡು ಕೈಗಳನ್ನು ಸೀರೆಯಿಂದ ಮಂಚಕ್ಕೆ ಕಟ್ಟಲಾಗಿತ್ತು. ಅವಳ ಕುತ್ತಿಗೆಯನ್ನು ಸೀರೆಯಿಂದ ಬಿಗಿಯಲಾಗಿತ್ತು. ಸದರಿ ಸೀರೆಯಿಂದ ಅವಳ ಕಣ್ಣುಗಳನ್ನು ಕಟ್ಟಲಾಗಿತ್ತು. ನನ್ನ ಅತ್ತೆಯ ಬಟ್ಟೆಗಳು ಅಸ್ತವ್ಯಸ್ತವಾಗಿದ್ದವು. ನನ್ನ ಅತ್ತೆಯ ಎಡ ಕಪಾಳದ ಮೇಲೆ ಗಾಯವಾಗಿದ್ದು, ಬಾಯಿಯಿಂದ ರಕ್ತ ಸೋರಿಕೆಯಾಗಿತ್ತು. ಮಂಚದ ಪಕ್ಕ ರಕ್ತ ಹತ್ತಿದ್ದ ತಲೆದಿಂಬು ಬಿದ್ದಿತ್ತು. ನನ್ನ ಅತ್ತೆಯ ಬಳೆಗಳು ಒಡೆದು ಚೆಲ್ಲಾಪಿಲ್ಲಿಯಾಗಿದ್ದವು. ನನ್ನ ಅತ್ತೆ ಮೈಮೇಲೆ ಧರಿಸುತ್ತಿದ್ದ ಕೈಯಲ್ಲಿಯ 4 ಚಿಕ್ಕ ಬಂಗಾರದ ಬಳೆಗಳು, 2 ದೊಡ್ಡ ಬಂಗಾರದ ಬಳೆಗಳು, ಕತ್ತಲ್ಲಿದ್ದ ಚೈನ ಸರ ಒಡವೆಗಳು ಮೈ ಮೇಲೆ ಇರಲಿಲ್ಲ. ಸ್ವಲ್ಪ ಹೊತ್ತಿನ ನಂತರ ಎಲ್ಲರೂ ಬಂದರು. ನನ್ನ ಅತ್ತೆ ಸ್ಥಿತಿಯನ್ನು ನೋಡಿ ಯಾರೋ ದುಷ್ಕರ್ಮಿಗಳು ನನ್ನ ಅತ್ತೆ ಬಂಗಾರದ ಒಡವೆಗಳಿಗಾಗಿ ನನ್ನ ಅತ್ತೆಯನ್ನು ಕೊಲೆ

ಮಾಡಿರುತ್ತಾರೆಂದು ನಮಗೆ ತಿಳಿದುಬಂದಿರುತ್ತದೆ. ನಾನು ಮತ್ತು ನನ್ನ ಅತ್ತೆಯ ಗಂಡು ಮಕ್ಕಳು ಸೇರಿ ಮನೆಯ ಒಳಗಿನ ಕೋಣೆಗಳಿಗೆ ಹೋದಾಗ ಮನೆಯಲ್ಲಿ ಗ್ಯಾಸ ವಾಸನೆ ಹರಡಿಕೊಂಡಿತ್ತು. ಗ್ಯಾಸ ಸಿಲಿಂಡರ್ ನ ಪೈಪ್ ಬಿಚ್ಚಲಾಗಿತ್ತು. ಹೊಸ್ತಿಲಿನ ಮೇಲೆ ಹಚ್ಚಿದ ಹಿತ್ತಾಳೆಯ ದೀಪ ಆರಿತ್ತು. ಸದರಿ ದೀಪದ ಪಕ್ಕದಲ್ಲಿ ಬೆಂಕಿಪೊಟ್ಟಣ ಬಿದ್ದಿತ್ತು. ನಂತರ ಚಾಸಾ-1 ರವರು ಶಿಗ್ಗಾಂವ ಪೋಲಿಸರಿಗೆ ದೂರನ್ನು ನೀಡಿದರು. ನಂತರ ನಾವು ನಮ್ಮ ಅತ್ತೆಯ ಶವಸಂಸ್ಕಾರವನ್ನು ಮಾಡಿರುತ್ತೇವೆ. ನಾನು ಸಹ ಗಾಭರಿಯಲ್ಲಿದ್ದೆ.

ನಾನು ಪೋಲಿಸರಿಗೆ ಹೇಳಿಕೆ ಕೊಟ್ಟ ನಂತರ ಚಾಸಾ-12 ನನ್ನ ಮುಂದೆ, ನನ್ನ ಅತ್ತೆ ಸಾಯುವ ಮುನ್ನ ಆರೋಪಿ ಮತ್ತು ಅವನ ಹೆಂಡತಿ ಒಂದು ವಾರದಿಂದ ನನ್ನ ಅತ್ತೆ ವಾಸವಿದ್ದ ಮನೆಗೆ ಬಂದು ಮನೆಯ ಅಟ್ಟವನ್ನು ಒಂದು ಆಫೀಸಿನ ಕೆಲಸಕ್ಕಾಗಿ ಬಾಡಿಗೆ ನಾತೆಯಿಂದ ಕೊಡುವಂತೆ ಕೇಳಿ, ನಂತರ ಒಬ್ಬ ಮಹಿಳೆಯನ್ನು ಸದರಿ ಆಫೀಸಿನವಳು ಎಂದು ಕರೆದುಕೊಂಡು ಬಂದು ಪರಿಚಯ ಮಾಡಿದ ನಂತರ ನನ್ನ ಅತ್ತೆಯ ಅವರಿಗೆ ಚಹಾದ ವ್ಯವಸ್ಥೆ ಮಾಡಿದ್ದಾಗಿ ನನ್ನ ಅತ್ತೆ ಅವಳ ಮುಂದೆ ಹೇಳಿದ್ದಾಗಿ ಚಾಸಾ-12 ನಮ್ಮ ಮುಂದೆ ಹೇಳಿದಳು. ನಂತರ ನಾನು ಮತ್ತು ನನ್ನ ಅತ್ತೆಯ ಮಕ್ಕಳು ಸಂಶಯ ಬಂದು ಆರೋಪಿಯ ಮನೆಗೆ ಹೋಗಿ ನೋಡಿದಾಗ ಮನೆಯಲ್ಲಿ ಯಾರು ಇರದೇ ಅವನ ಮನೆಯ ಬಾಗಿಲು ಬಂದ್ ಆಗಿ ಮನೆಯ ಕೀಲಿ ಹಾಕಲಾಗಿತ್ತು. ಈ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

ನಂತರ ಪೋಲಿಸರು ನನಗೆ ತಾಃ06.09.2019 ರಂದು ಆರೋಪಿಯನ್ನು ಪತ್ತೆ ಮಾಡಿ ಠಾಣೆಗೆ ಕರೆತಂದಿರುವುದಾಗಿ ಹೇಳಿದರು. ನಂತರ ನಾನು ಮತ್ತು ನಮ್ಮ ಅತ್ತೆ ಮಕ್ಕಳು ಠಾಣೆಗೆ ಹೋಗಿರುತ್ತೇವೆ. ಸದರಿ ಠಾಣೆಯಲ್ಲಿ ಆರೋಪಿ ಇದ್ದನು. ಪೋಲಿಸರಿಂದ ನಮಗೆ ಆರೋಪಿ ಮತ್ತು ಅವನ ಹೆಂಡತಿ ನನ್ನ ಅತ್ತೆ ಬಂಗಾರದ ಒಡವೆಗಳಿಗಾಗಿ ತಾಃ 16.08.2019 ರಂದು ರಾತ್ರಿ 11.30 ಸುಮಾರಿಗೆ ನನ್ನ ಅತ್ತೆಯನ್ನು ಮಾತನಾಡಿಸುವ ನೆಪ ಮಾಡಿಕೊಂಡು ಅವಳು ವಾಸವಿದ್ದ ಮನೆಗೆ ಹೋಗಿ ನನ್ನ ಅತ್ತೆ ಎರಡು ಕೈಗಳನ್ನು ಮಂಚಕ್ಕೆ ಕಟ್ಟಿ , ಕುತ್ತಿಗೆಗೆ ಮತ್ತು ಕಣ್ಣಿಗೆ ಸೀರೆ ಕಟ್ಟಿ, ತಲೆದಿಂಬನ್ನು ನನ್ನ ಅತ್ತೆಯ ಮುಖಕ್ಕೆ ಒತ್ತಿಹಿಡಿದು ಸಾಯಿಸಿದ ಬಗ್ಗೆ ಗೊತ್ತಾಯಿತು. ಆರೋಪಿ ಮತ್ತು ಅವನ ಹೆಂಡತಿ ನನ್ನ ಅತ್ತೆಯ ಬಂಗಾರದ ಒಡವೆಗಳಾದ 6 ಬಳೆಗಳು ಮತ್ತು ಒಂದು ಬಂಗಾರ ಲಾಕೇಟ ಸರ ತೆಗೆದುಕೊಂಡು ತಮ್ಮ ಮನೆಗೆ ಹೋಗಿ, ಮನೆಯಲ್ಲಿಟ್ಟು, ತಮ್ಮ ಮಕ್ಕಳನ್ನು ಅದಾಗಲೇ ಹುಬ್ಬಳ್ಳಿಗೆ ಕಳುಹಿಸಿ , ನಂತರ ತಾವು ಸಹ ಹುಬ್ಬಳ್ಳಿಯ ಉಣಕಲ್ ಕೆರೆಯ ಬಳಿ ಹೋಗಿ, ತಾವು ನನ್ನ ಅತ್ತೆಯನ್ನು ಕೊಲೆ ಮಾಡಿದ ವಿಷಯವನ್ನು ತನ್ನ ಮಕ್ಕಳಿಗೆ ಹೇಳಿ, ಪೋಲಿಸರು ತಮ್ಮನ್ನು ಉಳಿಸಲಾಗುವುದಿಲ್ಲ ಎಂದು ತಿಳಿದು ವಿಷ ಸೇವನೆ ಮಾಡಿ, ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಪಟ್ಟು ವಿಷ ಸೇವಿಸಿದ್ದರು. ಆರೋಪಿ ಮತ್ತು ಅವನ ಹೆಂಡತಿ ವಿಷ ಸೇವಿಸಿದ್ದರಿಂದ ಸದರಿಯವರನ್ನು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದರು. ಚಿಕಿತ್ಸೆಯಲ್ಲಿದ್ದಾಗ ಆರೋಪಿಯ ಹೆಂಡತಿ ತೀರಿಕೊಂಡ ವಿಷಯ ಗೊತ್ತಾಯಿತು. ಈ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಗೆ ನಿಪಿ-12 ರಿಂದ 16 ಪೊಟೊಗಳನ್ನು ತೋರಿಸಿದಾಗ ಸದರಿ ಪೊಟೊಗಳ ಪೈಕಿ ಒಂದು ಪೊಟೊದಲ್ಲಿ 4 ಬಂಗಾರದ ಬಳೆಗಳು ಇದ್ದು, ಇನ್ನೊಂದು ಪೊಟೊಗಳಲ್ಲಿ 2 ಬಂಗಾರದ ಬಳೆಗಳು ಇದ್ದು, ಇನ್ನೊಂದು ಪೊಟೊಗಳಲ್ಲಿ ಲಾಕೇಟ ಇರುವ ಬಂಗಾರದ ಸರವನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ. ಸದರಿ ಪೊಟೊಗಳಲ್ಲಿರುವ ವಸ್ತುಗಳನ್ನು ಈಗಾಗಲೆ ಮುಮಾ-1 ರಿಂದ 3 ಎಂದು ಗುರುತಿಸಲಾಗಿದೆ. ಸಾಕ್ಷಿಗೆ ಮುಮಾ-4 ರಿಂದ 16 ಗಳನ್ನು ತೋರಿಸಿದಾಗ ಸದರಿಯವುಗಳು ತನ್ನ ಅತ್ತೆಗೆ ಸೇರಿದ ಬಟ್ಟೆಗಳು, ಹಾಸಿಗೆ , ತಲೆದಿಂಬು, ದೀಪ, ಬೆಂಕಿಪೊಟ್ಟಣ , ಸ್ವೇಟರ್ , ಸ್ಕಾರ್ಫ್ , ಬ್ಲೌಸ್ , ಲಂಗ , ಸ್ವಲ್ಪ ಒಡೆದ ಬಳೆಯ ಚೂರುಗಳು ಎಂದು ಗುರುತಿಸುತ್ತಾರೆ. ನಾನು ಠಾಣೆಯಲ್ಲಿ ನೋಡಿದ ಆರೋಪಿಯು ಈಗ ನ್ಯಾಯಾಲಯದ ಮುಂದೆ ಇರುತ್ತಾನೆ.

ಆರೋಪಿ ಪರ ವಕೀಲರು ಸಮಯಾವಕಾಶ ಸಮಯಾವಕಾಶ ನೀಡಲಾಯ್ತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.